**ಸಿ.ಸಿ.462/2010**

***ಪ್ರಾಸಾಃ 2 ಚಾಸಾಃ 3***

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ. ದಂ. ನ್ಯಾಯಾಲಯ, ಬಳ್ಳಾರಿ.**

| | |
|---|---|
| ***ಹೆಸರು*** | ಶ್ರೀಮತಿ. ಜಯಶ್ರೀ |
| ***ಗಂಡನ ಹೆಸರು*** | ಶ್ರೀ.ಆರ್.ವಿಶ್ವನಾಥ |
| ***ವಯಸ್ಸು*** | 65 ವರ್ಷ |
| ***ವೃತ್ತಿ*** | ಗೃಹಿಣಿ |
| ***ವಿಳಾಸ*** | ಬೆಂಗಳೂರು |

**ದಿನಾಂಕಃ 20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ**

1. ಚಾಸಾ 1 ನನ್ನ ಮಗಳು. ಚಾಸಾ 2 ನನ್ನ ಗಂಡ. ಚಾಸಾ 4 ನನ್ನ ಮಗ. 1 ನೇ ಆರೋಪಿ ಚಾಸಾ 1 ರವರ ಗಂಡ.

2. ಚಾಸಾ 1 ರವರ ಮದುವೆಯು 1 ನೇ ಆರೋಪಿಯೊಂದಿಗೆ ದಿಃ 29-04-2007 ರಂದು ಮುಂಡ್ರಿಗಿ ಅನ್ನದಾನೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಮದುವೆಯಾದ ನಂತರ ಚಾಸಾ 1 ಮತ್ತು 1 ನೇ ಆರೋಪಿ ಸ್ವಲ್ಪ ಕಾಲ ಚೆನ್ನಾಗಿ ಇದ್ದರು. ನಾವು 1 ನೇ ಆರೋಪಿಗೆ 20 ಸಾವಿರ ರೂಪಾಯಿ ಮೌಲ್ಯದ ಪಾತ್ರೆ ಸಾಮಾನುಗಳು , 10 ಸಾವಿರ ರೂಪಾಯಿ ವರೋಪಚಾರ , 2 ಲಕ್ಷ ವರದಕ್ಷಣೆ ನೀಡಿರುತ್ತೇವೆ. ಆರೋಪಿ ಮದುವೆಯಾದ ಸ್ವಲ್ಪ ದಿನದ ನಂತರ ಒಬ್ಬ ಮುಸ್ಲಿಂ ಮಹಿಳೆ ಯೊಂದಿಗೆ ಅನೈತಿಕ ಸಂಬಂಧ ಇದೆ ಎಂದು ಗೊತ್ತಾಗಿರುತ್ತದೆ. ಸದರಿ ಮಹಿಳೆಯ ಹೆಸರು ತಬಸುಮ್ ಎಂದು ಆಗಿರುತ್ತದೆ. ಆ ವಿಚಾರದ ಬಗ್ಗೆ ಹಿರಿಯರ ಸಮ್ಮುಕದಲ್ಲಿ ಮಾತುಕತೆ ನಡೆಸಿದರೂ 1 ನೇ ಆರೋಪಿ ಸರಿಯಾಗಿರುವುದಿಲ್ಲ. ಸದರಿ ವಿಚಾರದ ಬಗ್ಗೆ 1 ನೇ ಆರೋಪಿಯ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿಗಳಿಗೆ ಕರೆಗಳನ್ನು ಕಳುಹಿಸಿರುತ್ತೇವೆ. ಸದರಿ ಆರೋಪಿತರು 1 ನೇ ಆರೋಪಿ ಸದರಿ ತಬಸುಮ್ (6 ನೇ ಆರೋಪಿ)ಯೊಂದಿಗೆ ಇರುವುದನ್ನು ಸಮ್ಮತಿಸಿದರೆ ಮಾತ್ರ ಚಾಸಾ 1 ಮತ್ತು ಅವರ ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಇಲ್ಲದಿದ್ದರೆ ಹೊಡೆಬಡೆ ಮಾಡುತ್ತೇವೆ ಎಂದು ಹೇಳಿರುತ್ತಾರೆ.

3. 1 ನೇ ಆರೋಪಿ ಮತ್ತು 6 ನೇ ಆರೋಪಿ ಈಗ ಜೊತೆಯಾಗಿ ಇರುತ್ತಾರೆ. ಚಾಸಾ 1 ರವರನ್ನು ನಾವು ನಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿತರು ಚಾಸಾ 1 ರವರಿಗೆ ಕಿರುಕುಳ ನೀಡುತಿದ್ದರು. ಆ ಕಾರಣ ಚಾಸಾ 1 ರವರನ್ನು ನಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

( ಆರೋಪಿತರ ಪರ ಮಾನ್ಯ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಸಮಂಜಸ ಕಾರಣ ನೀಡದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**ಮರು ವಿಚಾರಣೆಃ ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಬಳ್ಳಾರಿ.**